## ಪದಬಂಧ



ಎಡದಿಂದ ಬಲಕ್ಕೆ:

1. ಉದ್ದೇಶ ಏನಾದರೂ ಇರಲಿ, ಬೋಧನೆಯಂತೂ ಆಯಿತು 4
3. ಮಾರ್ಗವನ್ನೇ ಅರಿಯದೆ ಪಯಣ ಹೊರಟ ನೋಡಿ, ಹಳ್ಳಿಯ ಪೆದ್ದ 3
4. ಎಂಥರನ್ನೂ ಬೆದರಿಸುವಷ್ಟು ಚಳಿಯ ಪ್ರದೇಶದಲ್ಲಿ ನಾರಾಯಣನ ಸನ್ನಿಧಿ 3
6. ಮುರುಗನಿಗೆ ಅರ್ಪಿಸಲು ತರಿಸಿದ ವಸ್ತ್ರ, ಒಂದು ಮಡಿಕೆಯೂ ಕೆಟ್ಟಿಲ್ಲ 4
7. ಪಹರೆ ಕೆಲಸಕ್ಕೆ ಸೇರಲು ಇದೆಂಥ ಉತ್ಸಾಹ? 3
9. ಮಹತ್ವದ ಸಭೆ ನಡೆಯುವ ಸಾಧ್ಯತೆ ಇದೆ 3
11. ತನ್ನ ಉನ್ನತ ತರಗತಿಯನ್ನು ತೋರಿಸಲು ಆತ ಏರಿದ್ದು ಕುದುರೆ 3
13. ವ್ಯಾಯಾಮವನ್ನು ಕಲಿಸಲು ಬಂದಿರುವವ ನಮ್ಮ ದೇಶದವನಲ್ಲ 3
15. ಅಜರಾಮರನಾಗಿರುವ ಅವತಾರಪುರುಷನ ಒಡಹುಟ್ಟಿದವ ಲಕ್ಷ್ಮಣ ತಾನೇ ? 4
17. ನಿರಾಭರಣರಾಗಿ ಪಯಣಿಸುವವರಿಗೆ ಯಾವ ಹೆದರಿಕೆಯೂ ಇಲ್ಲ 3
18. ಸುಮ್ಮ ಸುಮ್ಮನೇ ಆತನಿಗೆ ಏಕಿಂಥ ಕೋಪ? 3
19. ಸಂಧಾನವನ್ನು ಇಲ್ಲೇ ಸಾಧಿಸಿದ್ದು ಇದು ದೇವರ ಸಾನ್ನಿಧ್ಯ 4

ಮೇಲಿಂದ ಕೆಳಕ್ಕೆ :

1. ಹಾವು, ಹಲ್ಲಿ, ಆಮೆ, ಮೊಸಳೆ ಇದಾವ ಪ್ರಾಣಿ ವರ್ಗ? 3
2. ಶಬ್ದಗಳಲ್ಲಿ ವಿವರಿಸಲಾಗದಂಥ ರಾಮ ಭಕ್ತೆ 3
3. ಗದೆ ಹಿಡಿದು ಬರುವವರು ಕಂಡರೆ ಬೈದು ಹೆದರಿಸು 3
5. ರೋಷ ಬರಿಸುವ ವರ್ತನೆ ಬೇಡ, ಅದೊಂದು ಗೂಳಿ 3
7. ಮಾಸಿಹೋದೀತು ಬಿಡಿ ; ಅದು ಬರೀ ಸುಳ್ಳು ನುಡಿ 4
8. ಪ್ರಾರಂಭ ಮಾಡಲು ಸೂಕ್ತವಾದದ್ದು ಮೈದಾನದ ಅಗ್ರ ಪ್ರದೇಶ 4
9. ಎಲ್ಲರಿಗೂ ಪ್ರಸಾದವನ್ನು ಸಂದಾಯ ಮಾಡುವುದು ಅಲ್ಲಿನ ವಾಡಿಕೆ 4
10. ಸಮಾಜದ ವರ್ತನೆಗಳನ್ನು ಕುರಿತ ಪ್ರಸ್ತುತದ ಸಮಾಚಾರ 4
12. ನೀರಜವನ್ನು ಹುಡುಕಿ ತರುವ ವೇಳೆಗೆ ರಾತ್ರಿಯಾಗಿತ್ತು 3
14. ಬಣ್ಣಬಣ್ಣ ಬೆರೆಸು; ಪೂರ್ಣ ವಿವರಿಸು 3
15. ಸಹಾಯವನ್ನು ಅರಸಿ ರಾಜನೇ ಬರೆದು ಕಳುಹಿದ ಪತ್ರ 3
16. ಮುಂಜಾನೆ ಎದ್ದೊಡನೆ ನೆನಪಾಗುವ ಪುಣ್ಯ ನದಿ 3

---

### 02.08.2021 ಉತ್ತರಗಳು

ಎಡದಿಂದ ಬಲಕ್ಕೆ:

1. ಸ್ವಾಭಾವಿಕ 3. ಜಾಮೂನು 4. ಮಕ್ಕರಿ 6. ಬರಗಾಲ 7. ಯಥೋಚಿತ 9. ರಹದಾರಿ 12. ಅನುಪಮ 14. ನಗಾರಿ 15. ಭವನ 16. ಸದಾಶಯ

ಮೇಲಿಂದ ಕೆಳಕ್ಕೆ:

1. ಸ್ವಾನುಕೂಲ 2.ಕಮನೀಯ 3. ಜಾಗರ 5. ರಿಕೋಚಿ (=ಚಿಕೋರಿ ತಲೆಕೆಳಗು) 6. ಬಡಿವಾರ 8. ತರತಮ 10. ಹವನ 11. ರಿದಾರಿಸ (= ಸರಿದಾರಿ ತಲೆಕೆಳಗು)12. ಅರಿಭಯ 13. ಪವನ

ಪ್ರಶ್ನಾಂಕಣ

## ಗ್ರೀನ್‌ಲ್ಯಾಂಡ್‌ನಲ್ಲಿ ಮಳೆ: ಆತಂಕ ಏಕೆ?

ಇದೇ ಕಳೆದ ಆಗಸ್ಟ್ 14 ರಂದು ಧರೆಯ ಉತ್ತರ ಧ್ರುವವನ್ನು ಪರಿವರಿಸಿರುವ ಆರ್ಕ್ಟಿಕ್ ಪ್ರದೇಶದ ಗ್ರೀನ್‌ಲ್ಯಾಂಡ್‌ನಲ್ಲಿ ಪ್ರಳಯ ಸದೃಶ ಮಳೆ ಸುರಿಯಿತು. ಹಲವಾರು ತಾಸು ಮುಗಿಲೇ ಬಿರಿದಂತೆ ಅವಿರತ ಸುರಿದ ಆ ಮಳೆಯಲ್ಲಿ ಸಮೀಪ ಏಳು ಶತಕೋಟಿ ಟನ್ ನೀರು ಧರೆಗೆ ಧುಮುಕಿ ಹರಿಯಿತು. ಈ ವಿದ್ಯಮಾನ ಜಗದಾದ್ಯಂತ ಇಳೆಯ ಗೆಳೆಯರನ್ನೂ, ಪರಿಸರ ಪ್ರಿಯರನ್ನೂ ಗಾಬರಿಗೊಳಿಸಿ ಭಾರೀ ಆತಂಕಕ್ಕೆ ದೂಡಿತು!

ಆತಂಕ ಏಕೆಂದರೆ, ಪೃಥ್ವಿಯ ಅತ್ಯಂತ ವಿಶಾಲ ದ್ವೀಪ ಗ್ರೀನ್‌ಲ್ಯಾಂಡ್ ಅನ್ನೂ ಒಳಗೊಂಡಿರುವ ಭೂ ಶಿರೋಭಾಗದ ಶಾಶ್ವತ ಹಿಮಾವೃತ ಶೀತಲ ಲೋಕ ಆರ್ಕ್ಟಿಕ್ ನಲ್ಲಿ ಮಳೆ ಅತ್ಯಂತ ಅಪರೂಪ. ಭಾರೀ ಮಳೆಯಂತೂ ಅಲ್ಲಿ ಅಸ್ವಾಭಾವಿಕ. ಆಗಸ್ಟ್ 14 ರಂದು ಸುರಿದಂತಹ ಮಳೆಯದಂತೂ ಒಂದೇ ಒಂದು ದಾಖಲೆಯೂ ಇಲ್ಲ. ಗಾಬರಿಯಾಗಿರುವುದು ಇದೊಂದೇ ಮಳೆಗಾಗಿ ಅಲ್ಲ. ಇಂಥ ಮಳೆ ಆರ್ಕ್ಟಿಕ್ ನ ಪ್ರಾಕೃತಿಕ ಪರಿಸ್ಥಿತಿ ತೀರ ಹದಗೆಡುವ ಹಾದಿ ಹಿಡಿದಿರುವ, ಭೂ ಭವಿಷ್ಯವೇ ಅಪಾಯದತ್ತ ನಡೆದಿರುವ ಮತ್ತೊಂದು ಪ್ರಬಲ ಸಂಕೇತ. ಅದಕ್ಕಾಗಿ ಇಷ್ಟು ಚಿಂತೆ, ಭಯ, ಕಳವಳ ಎಲ್ಲ.

ನಿಮಗೇ ತಿಳಿದಂತೆ ನಮ್ಮ ಪೃಥ್ವಿಯ ಉತ್ತರ ಧ್ರುವವನ್ನು ಪರಿವರಿಸಿರುವ ಆರ್ಕ್ಟಿಕ್ ಪ್ರದೇಶ ಮತ್ತು ದಕ್ಷಿಣ ಧ್ರುವವನ್ನು ಒಳಗೊಂಡಿರುವ ಅಂಟಾರ್ಕ್ಟಿಕಾ ಭೂಖಂಡ ಇವೆರಡೂ ಶಾಶ್ವತ ಹಿಮ ಲೋಕಗಳಾಗಿವೆ. ಈ ಎರಡೇ ನೆಲೆಗಳಲ್ಲಿ ಇಡೀ ಧರೆಯ ಶುದ್ಧ ನೀರಿನ ಶೇಕಡ 98 ಭಾಗ ಘನ ರೂಪದಲ್ಲಿ ದಾಸ್ತಾನುಗೊಂಡಿದೆ. ಈ ಶೀತಲ ಲೋಕಗಳ ಮತ್ತು ಸಮಭಾಜಕದ ಆಸುಪಾಸಿನ ಬಹು ಬಿಸಿಯ ಪ್ರದೇಶಗಳ ನಡುವಣ ತಾಪಾಂತರದಿಂದಾಗಿ ಸಾಗರದ ನೀರಿನಲ್ಲಿ ಮತ್ತು ವಾಯುಮಂಡಲದ ಗಾಳಿಯಲ್ಲಿ ಶಾಖ ಸಂವಹನ ಪ್ರವಾಹಗಳು ನಿರಂತರ ಹರಿದಾಡುತ್ತಿವೆ. ಈ ಕಾರಣದಿಂದಲೇ ಮಳೆ ಚಕ್ರ, ಮಾರುತ ಚಕ್ರ ಇತ್ಯಾದಿ ಸರ್ವ ವಿಧ ವಿದ್ಯಮಾನಗಳು ಮೈದಳೆದು ಕ್ರಿಯಾಶೀಲವಾಗಿವೆ. ತತ್ಪರಿಣಾಮವಾಗಿ ಇಡೀ ಪೃಥ್ವಿ ಜೀವಿ ಧಾರಕ, ಜೀವಿ ಪೋಷಕ ಲೋಕವಾಗಿ ಉಳಿದಿದೆ.




ಆದರೆ ಎಲ್ಲರಿಗೂ ತಿಳಿದಿರುವಂತೆ ಮಾನವರ ಪ್ರಸ್ತುತದ ಮಿತಿ ಮೀರಿದ ಕೈಗಾರಿಕಾ ಚಟುವಟಿಕೆಗಳಿಂದಾಗಿ ವಾಯುಮಂಡಲಕ್ಕೆ 'ಹಸಿರು ಮನೆ ಅನಿಲಗಳು' ಹೆಚ್ಚು ಹೆಚ್ಚು ಸೇರುತ್ತ ಭೂ ತಾಪ ಏರುತ್ತಿದೆ. ಹಾಗಾಗಿ ಶೀತಲ ಲೋಕಗಳಲ್ಲಿ, ಅದರಲ್ಲೂ ವಿಶೇಷವಾಗಿ ಆರ್ಕ್ಟಿಕ್ ಪ್ರದೇಶದಲ್ಲಿ, ಹಿಮ ಸಂಗ್ರಹವೆಲ್ಲ ಕ್ಷಿಪ್ರವಾಗಿ ಕರಗುತ್ತಿದೆ (ಚಿತ್ರಗಳಲ್ಲಿ ಗಮನಿಸಿ); ಹಾಗೆ ಕರಗಿ ಹರಿಯುತ್ತಿರುವ ನೀರಿನ ಮಹಾಪೂರವೇ ನಿರಂತರ ಕಡಲಿಗೆ ಬೆರೆಯುತ್ತಿದೆ. ಅದರ ಪರಿಣಾಮವಾಗಿ ಸಾಗರದ ನೀರಿನ ಮಟ್ಟ ಏರುತ್ತಿದೆ ; ಜಗದಾದ್ಯಂತ ಕಡಲಂಚುಗಳ ಬಹುಭಾಗ ಮುಳುಗಿಹೋಗುವ ಪರಿಸ್ಥಿತಿ ಸಮೀಪಿಸುತ್ತಿದೆ. ವಸ್ತು ಸ್ಥಿತಿ ಹಾಗಿರುವಾಗ ಆರ್ಕ್ಟಿಕ್ ನಲ್ಲಿ ಮಹಾ ಮಳೆ ಸುರಿದದ್ದು ಅಲ್ಲಿನ ತಾಪಮಾನದ ಹೆಚ್ಚಳ ಮತ್ತೂ ವೇಗಗೊಳ್ಳುತ್ತಿದೆ ಎಂಬುದನ್ನು ಸ್ಪಷ್ಟಗೊಳಿಸುತ್ತದೆ ತಾನೇ? ಅದಕ್ಕೇ ಈ ಆತಂಕ!

■ ಎನ್. ವಾಸುದೇವ್